# ಕರ್ನಾಟಕ ಸರ್ಕಾರದ ನಡವಳಿಗಳು

(12)

**ವಿಷಯ:** ಸಾರ್ವಜನಿಕ ಉದ್ದಿಮೆಗಳ ಸಮಿತಿಯ 117ನೇ ವರದಿಯನುಸಾರ ಡಾ: ಹೆಚ್.ಡಿ.ಶೇಷಗಿರಿ, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿ., ಇವರ ವಿರುದ್ಧ ಶಿಸ್ತುಕ್ರಮ ಕುರಿತು.

**ಓದಲಾಗಿದೆ:**

1). ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂಖ್ಯೆ: ಕೃಇ 28 ಕೃಪವಿ 2011, ದಿನಾಂಕ:28-05-2013.

2). ಶ್ರೀ ಹೆಚ್.ಡಿ. ಶೇಷಗಿರಿ, ಅಪರ ಕೃಷಿ ನಿರ್ದೇಶಕರು(ಜಾಗೃತದಳ), ಜಲಾನಯನ ಅಭಿವೃದ್ಧಿ ಇಲಾಖೆ ರವರ ಸ್ವೀಕೃತಿ ದಿನಾಂಕ:11-07-2013 ಮತ್ತು 20-01-2014.

*********

**ಪ್ರಸ್ತಾವನೆ:**

ಕರ್ನಾಟಕ ಆಗ್ರೋ ಕಾರ್ನ್ ಪ್ರಾಡೆಕ್ಟ್ಸ್ ಲಿಮಿಟೆಡ್., ಸಂಸ್ಥೆಯು ಕೃಷಿ ಇಲಾಖೆಯ ಅಧೀನದಲ್ಲಿರುವ ಒಂದು ಸಾರ್ವಜನಿಕ ಉದ್ದಿಮೆಯಾಗಿದ್ದು, ಸದರಿ ಸಂಸ್ಥೆಯು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಪೌಷ್ಠಿಕ ಆಹಾರವನ್ನು ಪ್ರಮುಖವಾಗಿ ಸರಬರಾಜು ಮಾಡುತ್ತಿತ್ತು. 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕತೆ ಅಧಿನಿಯಮ ಜಾರಿಗೊಳಿಸುವ ಮೊದಲು ಸದರಿ ಸಂಸ್ಥೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪೌಷ್ಠಿಕ ಆಹಾರ ಸರಬರಾಜು ಮಾಡುವ ಏಕೈಕ ಸಂಸ್ಥೆಯಾಗಿದ್ದು. ಸದರಿ ಅಧಿನಿಯಮ ಜಾರಿಗೆ ಬಂದ ನಂತರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸದರಿ ಅಧಿನಿಯಮದ ಪ್ರಕಾರ ಟೆಂಡರ್ ಮೂಲಕ ಪೌಷ್ಠಿಕ ಆಹಾರವನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರ ಮೇರೆಗೆ, ಕರ್ನಾಟಕ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ ಸಂಸ್ಥೆಯು ಟೆಂಡರ್ ಪ್ರಕ್ರಿಯೆಯಲ್ಲಿ ನಿಗದಿತ ಸಮಯಕ್ಕೆ ಹಾಜರಾಗದೇ, ಭಾಗವಹಿಸುವಲ್ಲಿ ವಿಳಂಬ ಮಾಡಿದ ಕಾರಣ ತಮಿಳುನಾಡಿನ ಒಂದು ಖಾಸಗಿ ಸಂಸ್ಥೆಯು ಟೆಂಡರ್ ಪಡೆಯುವಲ್ಲಿ ಯಶಸ್ವಿಯಾಯಿತು.

ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ದಿಮೆಗಳ ಸಮಿತಿಯು ತನ್ನ 117ನೇ ವರದಿಯಲ್ಲಿ ಕರ್ನಾಟಕ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ ಸಂಸ್ಥೆ ಬಗ್ಗೆ ಸವಿಸ್ತಾರವಾಗಿ ವಿಶ್ಲೇಷಿಸಿ, ಟೆಂಡರ್ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಹೊಣೆಗಾರರಾದ ಅಂದಿನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಯಾವ ಕಾರಣಕ್ಕೆ ವ್ಯವಸ್ಥಾಪಕ ನಿರ್ದೇಶಕರು ಟೆಂಡರ್‌ನಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ, ವ್ಯವಸ್ಥಾಪಕ ನಿರ್ದೇಶಕರು ದಾಖಲೆಗಳನ್ನು ಬಿಟ್ಟು ಬಂದಿದ್ದು ಸತ್ಯವೋ ಅಥವಾ ಸುಳ್ಳೋ ಎನ್ನುವ ಬಗ್ಗೆ ಮತ್ತು ದಾಖಲೆಗಳನ್ನು

--2--

ತೆಗೆದುಕೊಂಡು ಬರುತ್ತಿದ್ದ ಸಮಯದಲ್ಲಿ ದಾರಿಯಲ್ಲಿ ಯಾರೋ ತಡೆದರು ಅದರಿಂದ ಏಳು ನಿಮಿಷ ತಡವಾಗಿ ಟೆಂಡರ್ ಅರ್ಜಿ ಸಲ್ಲಿಸಲಾಗಿತ್ತು ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಶ್ರೀ ಜಿ. ಸತೀಶ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಇವರಿಂದ ಈ ವಿಷಯವನ್ನೊಳಗೊಂಡಂತೆ ತನಿಖೆಯನ್ನು ನಡೆಸಿ, ಸದರಿ ತನಿಖಾ ವರದಿ ಮತ್ತೀತರ ಸಂಬಂಧಿಸಿದ ದಾಖಲೆಗಳನ್ನು ಆಧರಿಸಿ, ಈಗಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿ., ರವರು ಸರ್ಕಾರಕ್ಕೆ ಕಳುಹಿಸಿರುವ ಪ್ರಸ್ತಾವನೆಯಂತೆ, ಅಂದಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಡಾ: ಹೆಚ್.ಡಿ.ಶೇಷಗಿರಿ, ಹಾಲಿ ಅಪರ ಕೃಷಿ ನಿರ್ದೇಶಕರು(ಜಾಗೃತದ ದಳ), ಜಲಾನಯನ ಅಭಿವೃದ್ಧಿ ಇಲಾಖೆ ಇವರ ವಿರುದ್ದ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ತೀರ್ಮಾನಿಸಿ, ಅವರಿಗೆ ಮೇಲಿನ ಕ್ರಮಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 28-05-2013ರ ಕಾರಣ ಕೇಳುವ ಪತ್ರವನ್ನು ಆಪಾದನಾ ಪಟ್ಟಿಯೊಂದಿಗೆ ಜಾರಿ ಮಾಡಿ, ಪ್ರತಿರಕ್ಷಣಾ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಕ್ರಮಾಂಕ (2)ರಲ್ಲಿ ಓದಲಾದ ಪತ್ರಗಳಲ್ಲಿ ಡಾ: ಹೆಚ್.ಡಿ.ಶೇಷಗಿರಿ, ಹಾಲಿ ಅಪರ ಕೃಷಿ ನಿರ್ದೇಶಕರು(ಜಾಗೃತದಳ), ಜಲಾನಯನ ಅಭಿವೃದ್ಧಿ ಇಲಾಖೆ ರವರು ತಮಗೆ ಜಾರಿ ಮಾಡಿದ ಕಾರಣ ಕೇಳುವ ಪತ್ರವನ್ನು ದಿನಾಂಕ:11-07-2013 ರಂದು ಸ್ವೀಕೃರಿಸಿ, ಸದರಿ ಕಾರಣ ಕೇಳುವ ಪತ್ರಕ್ಕೆ ಉತ್ತರಿಸಲು 30 ದಿವಸಗಳ ಕಾಲಾವಕಾಶ ಕೋರಿದ್ದಲ್ಲದೆ ಉತ್ತರಿಸಲು ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಕೋರಿದ್ದು. ಅದರಂತೆ ಅವರಿಗೆ ದಿನಾಮಕ:20-01-2014 ರಂದು ಅವರು ಕೋರಿದ ದಾಖಲೆಗಳ ಪ್ರತಿಗಳನ್ನು ನೀಡಿದ್ದರೂ ಸಹ ಸದರಿಯವರು ಇದುವರೆಗೂ ತಮಗೆ ಜಾರಿ ಮಾಡಿದ ಕಾರಣ ಕೇಳುವ ಪತ್ರಕ್ಕೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಆದುದರಿಂದ, ಈ ಪ್ರಕರಣದಲ್ಲಿ ಅವರ ಹೇಳಿಕೆ ಏನು ಇಲ್ಲವೆಂದು ಭಾವಿಸಿ, ಪ್ರಕರಣದ ಸತ್ಯಸತ್ಯತೆಯನ್ನು ತಿಳಿಯುವ ಸಲುವಾಗಿ ಇಲಾಖಾ ವಿಚಾರಣೆ ನಡೆಸುವುದು ಸಮಂಜಸವೆಂದು ತೀರ್ಮಾನಿಸಿ, ಅದರಂತೆ ಪ್ರಕರಣವನ್ನು ಇಲಾಖಾ ವಿಚರಣೆಗೆ ಒಪ್ಪಿಸಲು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 28 ಕೃಪವಿ 2011**
**ಬೆಂಗಳೂರು. ದಿನಾಂಕ: 06-05-2014**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ, ಡಾ:ಹೆಚ್.ಡಿ.ಶೇಷಗಿರಿ, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿ., ಪ್ರಸ್ತುತ, ಅಪರ ಕೃಷಿ ನಿರ್ದೇಶಕರು(ಜಾಗೃತ ದಳ), ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರ ವಿರುದ್ದದ ಆರೋಪಗಳ ಬಗ್ಗೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ

11 ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಶ್ರೀ. ಕೆ. ರಾಧಾಕೃಷ್ಣ ಹೊಳ್ಳ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಮತ್ತು ಡಾ: ಹೆಚ್. ಸುಬ್ಬಯ್ಯ, ವ್ಯವಸ್ಥಾಪಕ ನಿರ್ದೇಶಕರು(ಪ್ರಭಾರಿ), ಕರ್ನಾಟಕ ರಾಜ್ಯ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿ., ಪ್ರಸ್ತುತ, ಅಪರ ಕೃಷಿ ನಿರ್ದೇಶಕರು(ಬೆಳೆ ಅಭಿವೃದ್ಧಿ ಮತ್ತು ಯೋಜನೆ), ಇವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಶ್ರೀ ರಾಧಾಕೃಷ್ಣ ಹೊಳ್ಳ, ನಿವೃತ್ತ ನ್ಯಾಯಾಧೀಶರು, ನಂ.180, ಲಿಂಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು-560018.
5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಕಾಸಸೌಧ. ಬೆಂಗಳೂರು.
6. ಡಾ: ಹೆಚ್, ಸುಬ್ಬಯ್ಯ, ವ್ಯವಸ್ಥಾಪಕ ನಿರ್ದೇಶಕರು(ಪ್ರಭಾರಿ), ಅಪರ ಕೃಷಿ ನಿರ್ದೇಶಕರು(ಬೆಳೆ ಅಭಿವೃದ್ಧಿ ಮತ್ತು ಯೋಜನೆ), ಕೃಷಿ ಕಾರ್ಯಾಲಯ, ಕೇಂದ್ರ ಕಛೇರಿ, ಶೇಷಾದ್ರಿ ರಸ್ತೆ, ಬೆಂಗಳೂರು.
7. ಸಂಬಂಧಿಸಿದ ಅಧಿಕಾರಿಗಳಿಗೆ (ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಮುಖಾಂತರ)
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.